## 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 68 /2025

P.W : 2

C.W: 1

**ದಿನಾಂಕ 08.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಹಂಜಾದೇವಿ

**ಗಂಡನ ಹೆಸರು** : ಲೇಟ್ ಪೀರಾರಮ್

**ವಯಸ್ಸು** : 33 ವರ್ಷ

**ವೃತ್ತಿ** : ಬ್ಯಾಗ್ ಅಂಗಡಿ ವ್ಯಾಪಾರ

**ವಾಸಸ್ಥಳ** : ಶಿರಾ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. 1 ನೇ ಆರೋಪಿ ನನ್ನ ಯಜಮಾನರ ಸ್ವಂತ ಅಣ್ಣ. 2 ನೇ ಆರೋಪಿ, ನನ್ನ ಯಜಮಾನರ ದೊಡ್ಡ ಅಣ್ಣ. ಸೀತಾದೇವಿ 1 ನೇ ಅರೋಪಿ ಹೆಂಡತಿ. 4 ನೇ ಆರೋಪಿಯು 2 ನೇ ಆರೋಪಿಯ ಹೆಂಡತಿ. ದಿ.17.10.2020 ರಂದು ನನ್ನ ಯಜಮಾನರು ತೀರಿಕೊಂಡಿರುತ್ತಾರೆ. ನನ್ನ ಯಜಮಾನರು ಪ್ರತಿ ದಿನ 07.00 ಗಂಟೆಗೆ ಅಂಗಡಿಗೆ ಹೋಗುತ್ತಾರೆ. 09.00 ಗಂಟೆಗೆ ನನ್ನ ಮಗ ನನ್ನ ಯಜಮಾನರಿಗೆ ತಿಂಡಿ ತೆಗೆದುಕೊಂಡು ಹೋಗಿದ್ದರು. ನನ್ನ ಮಗ ಭರತ್‌ನು 5 ನಿಮಿಷದಲ್ಲಿ ಮನೆಗೆ ವಾಪಸ್ ಬಂದು, ಅಂಗಡಿಯಲ್ಲಿ ನನ್ನ ಯಜಮಾನರು ನೇಣು ಹಾಕಿಕೊಂಡಿದ್ದಾರೆ ಎಂದು ನನಗೆ ಹೇಳಿದನು. ತಕ್ಷಣ ನಾನು ಅಂಗಡಿಗೆ ಹೋದೆ. ಅಕ್ಕಪಕ್ಕದಲ್ಲಿರುವ

ಜನರು ಅಂಗಡಿಯ ಬಳಿ ಬಂದರು. ನಂತರ ಪೋಲೀಸರು ಬಂದರು. ನಮ್ಮ ಸಮಾಜದವರು ಅಲ್ಲಿಗೆ ಬಂದರು. 1 ನೇ ಆರೋಪಿಯು ನನ್ನ ಯಜಮಾನರಿಗೆ 4 ವರ್ಷಗಳಿಂದ ಹಿಂಸೆ ಕೊಡುತ್ತಿದುದರಿಂದ ನನ್ನ ಯಜಮಾನರು ಆತ್ಮಹತ್ಯೆ ಮಾಡಿಕೊಂಡರು. ಯಾವ ವಿಚಾರಕ್ಕೆ ಹಿಂಸೆ ಕೊಡುತ್ತಿದ್ದರು ಎಂಬ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಯದ್ವಾತದ್ವ ಸಾಕ್ಷಿ ಹೇಳುತ್ತಿದುದರಿಂದ ಮತ್ತು ಅವರು ಗಾಬರಿಯಲ್ಲಿದುದರಿಂದ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.